ಕಾಳಜಿ, ಬಾಲ ವಿಧವೆ ಅತ್ತಿಗೆ ಸರಸೋತಿ ಎಲ್ಲರಲ್ಲಿಯೂ ಮನೆಗೆಲಸ, ಹೊರಗೆಲಸ ಎಂದೆಲ್ಲ ಮೂಕವಾಗಿ ದುಡಿಯುವ ಪಾರೋತಿಯಂತಹ ಸೌಮ್ಯ ಸ್ವಭಾವದ ಹೆಣ್ಣು ಮಕ್ಕಳನ್ನು ನೋಡುತ್ತಲೇ ಇರುತ್ತೇವೆ.

ಮಳೆಗಾಲದಲ್ಲಿ ಒಲೆ ಉರಿಸುವ ಸೌದೆಗೋಸ್ಕರ ಕಡಲಿನ ತೆರೆಗಳೊಂದಿಗೆ ಸಾಹಸಕ್ಕೆಳಸುವ, ಹಟ್ಟಿ, ದನ, ಗದ್ದೆ, ಹಾಡಿ, ಅಡುಗೆ, ಬೇಯಿಸುವುದು, ದೂರ್ವಾಸ ಮುನಿಯಂತಹ ಗಂಡನ ಕೋಪ ತಾಳಿಕೊಳ್ಳುವುದು, ಸದಾ ತನಗೆ ಇಂಬಾಗಿ ನಿಂತುಕೊಳ್ಳುವ ಅತ್ತಿಗೆ ಸರಸೋತಿಯ ಮಾತು, ತುಂಬಿದ ಹೊಳೆ, ಕಡಲನ್ನು ಮಾತಿಲ್ಲದೆ ನೋಡುವುದು... ಹೀಗೆ ನನ್ನ ಚಿತ್ತದಲ್ಲಿ ಕೆತ್ತಿದ ಪಾರೋತಿಯ ಪ್ರತಿಮೆ ದಟ್ಟವಾದ ಬಣ್ಣದ್ದು.

ಪಾರೋತಿಯ ಪ್ರೀತಿರಹಿತ ದಾಂಪತ್ಯದಲ್ಲಿ ಒಂದು ಮಗುವಾದರೂ ಚಿಗುರೊಡೆದಿದ್ದರೆ ಅವಳಿಗೆ ಕೊಂಚವಾದರೂ ಸುಖ ಸಂತೋಷಗಳು ಸಿಗುತ್ತಿದ್ದವೇನೋ. ಹೊಟ್ಟೆಯಲ್ಲಿ ತುಂಬಿದ ತನ್ನ ಪ್ರೀತಿ ಮಮತೆಗಳನ್ನು ಯಾರ ಮೇಲೆ ಸುರಿಯಲಿ ಎನ್ನುವುದೇ ಆಕೆಗೆ ತಿಳಿಯದು. ಸಂಸಾರದ ಕಟ್ಟುಕಟ್ಟಳೆ, ರೀತಿ ರಿವಾಜು, ಬಿಗು, ನಿರಂತರ ದುಡಿತವನ್ನು ಆಕೆ ಯಥಾವತ್ ಸ್ವೀಕರಿಸುತ್ತ ಮುನ್ನಡೆದವಳು. ತನ್ನ ಬದುಕು ಹೀಗಾಯಿತಲ್ಲಾ ಎಂಬುದಾಗಿ ಆಕೆ ಯಾರ ಬಗ್ಗೆಯೂ ಕಹಿ ತೋರುವುದಿಲ್ಲ ಎನ್ನುವುದೇ ನನಗೊಂದು ಅಚ್ಚರಿಯ ವಿಷಯ. ಅದು ಕೇವಲ ಅಸಹಾಯಕತೆ ಎನ್ನುವುದಕ್ಕಿಂತ ಅವಳ ಮನೋಧರ್ಮವೇ ಇದ್ದಿರಬೇಕು. ತನಗೊಬ್ಬಳಿಗೇ ಎಂದಾದಲ್ಲಿ ರುಚಿಕಟ್ಟಾದ ಅಡುಗೆ ಕೂಡ ಮಾಡಿಕೊಳ್ಳದೆ, ಕುಚ್ಚಲಕ್ಕಿ ಗಂಜಿ, ಉಪ್ಪಿನಕಾಯಿಯಲ್ಲಿ ಊಟ ಮುಗಿಸುವ, ಅವಡೆ ಸೊಪ್ಪು, ಹುರುಳಿ ಕಾಳು, ಹಣ್ಣು ಸೌತೆ ಎಂದೆಲ್ಲ ಶ್ರೀಮಂತನಾಗಿದ್ದರೂ ಜಿಪುಣ ಯಜಮಾನಿಕೆಯ ಗಂಡನ ದೆಸೆಯಿಂದ ಕಡು ಬಡವರಂತೆ ಬದುಕುವ ಅವಸ್ಥೆ ಈ ಅತ್ತಿಗೆ-ನಾದಿನಿಯರದು.

ತನ್ನ ಅರಸಿಕ, ಕೋಪಿಷ್ಠ ಗಂಡನೊಂದಿಗೆ ಏಗುತ್ತಲೇ ತನಗೆ ಸ್ಪಂದಿಸುವ ಸಹೃದಯಿ ಅತ್ತಿಗೆ ನೀಡಿದ ಸಲಹೆಯಂತೆ ಮಗುವೊಂದನ್ನು ದತ್ತು ಪಡೆಯುವ ಯೋಚನೆ ಪಾರೋತಿಯಲ್ಲಿ ಮೊಳೆಯುತ್ತದೆ. ಇದನ್ನು ಗಂಡನಲ್ಲಿ ಪ್ರಸ್ತಾಪಿಸಲು ಕೂಡ ಆತನ ಮರ್ಜಿಗೆ ಕಾಯಬೇಕಾದ ಪರಿಸ್ಥಿತಿ.

ಆ ಬಡಪಾಯಿ ಹೆಣ್ಣು ಮಕ್ಕಳು ಕೆಲಸದಾಳುಗಳಂತೆಯೇ ದುಡಿದು ಆ ವರ್ಷ ಹದಿನೈದು ಮುಡಿ ಅಕ್ಕಿ ಹೆಚ್ಚು ಇಳುವರಿ ಬರುತ್ತದೆ. ಶ್ರಮ, ಸಮಯ, ಮಾನಸಿಕ ಚೈತನ್ಯ ಮೊದಲುಗೊಂಡು ಭೂಮಿ ಮತ್ತು ಹೆಣ್ಣಿನ ಸಂಪನ್ಮೂಲಗಳನ್ನು ಬರಿದಾಗಿಸುವ ಗಂಡಾಳ್ವಿಕೆಯ ಪ್ರತೀಕದಂತೆಯೇ ರಾಮ ಐತಾಳರು ಮಗುವನ್ನು ದತ್ತು ತೆಗೆದುಕೊಳ್ಳುವ ಬದಲಿಗೆ, ತಾವೇ ಇನ್ನೊಂದು ಮದುವೆಯಾಗುತ್ತಾರೆ. ಅದೂ ತನ್ನ ಮನೆಗೋಸ್ಕರ ರಕ್ತ ನೀರಾಗಿಸಿ ದುಡಿದ ಹೆಂಡತಿಗಾಗಲಿ, ಗೆಯ್ಮೆಗೆ ಶರಣಾಗಿ ನಿಂತ ತನ್ನ ತಂಗಿಗಾಗಲಿ ಕೊನೆಯ ಕ್ಷಣದವರೆಗೆ ಒಂದು ಮಾತೂ ಹೇಳದೆ.

ಈ ಕಾದಂಬರಿಯಲ್ಲಿ ನನ್ನನ್ನು ಅಲುಗಾಡಿಸಿದ ಇನ್ನೊಂದು ವಿಷಯ ಪಾರೋತಿ ಮತ್ತು ಸರಸೋತಿ ಮಿಡಿ ಉಪ್ಪಿನಕಾಯಿ ಹಾಕುವ ಪ್ರಸಂಗ. ಮೈಲಿಗಟ್ಟಲೆ ನಡೆದು, ಉಪ್ಪು, ಖಾರದ ಖರ್ಚು ಎಂದೆಲ್ಲ ಪರದಾಡಿ, ಮುತುವರ್ಜಿ ವಹಿಸಿ ಮಳೆಗಾಲಕ್ಕೆಂದು ಹಾಕಿದ ಮಿಡಿ ಉಪ್ಪಿನಕಾಯಿ, ಹಪ್ಪಳಗಳು ರಾಮ ಐತಾಳರ ಎರಡನೆಯ ಮದುವೆಯ ಊಟಕ್ಕೆ ಖರ್ಚಾಗುತ್ತದೆ. ತನ್ನ ಮದುವೆಗೆ ಸ್ವಂತ ಹೆಂಡತಿ, ತಂಗಿಯಿಂದ ಚಪ್ಪರ ಹಾಕಿಸುವ, ಅಂಗಳದ ನೆಲವನ್ನು ಕನ್ನಡಿಯಂತೆ ಫಳಫಳ ಹೊಳೆಯುವಂತೆ ತೊಳೆಯಲು ಕೂಲಿಯವರಂತೆ ದುಡಿಸಿಕೊಳ್ಳುವ ಯಜಮಾನಿಕೆ ಅವರದ್ದು. ಆ ಕಲ್ಲು ಹೃದಯದ ಯಜಮಾನಿಕೆಯಲ್ಲಿ ನಲುಗುವ, ನೋವು ಸಹಿಸಿಕೊಳ್ಳುವ ಪಾರೋತಿಯ ಪರಿಸ್ಥಿತಿಯನ್ನು ನೋಡಿದರೆ ಮನಸ್ಸು ಮರುಗುತ್ತದೆ. ಹಳೆಯ ತಲೆಮಾರಿನ ಸಮಾಜದಲ್ಲಿ ಈ ಶೈಲಿಯ ಯಜಮಾನಿಕೆಯು ಇದ್ದಿದ್ದು ನಿಜ. ತನ್ನ ಗಂಡ ತನ್ನಲ್ಲಿ ಕೇಳದೆಯೇ ಇನ್ನೊಂದು ಮದುವೆ ನಿಕ್ಕಿ ಮಾಡಿಕೊಂಡಿದ್ದನ್ನು ಪ್ರತಿಭಟಿಸಬೇಕೆಂದು ಕೂಡ ಈ ಅಸಹಾಯಕ, ಅಮಾಯಕ ಹೆಣ್ಣು ಪಾರೋತಿಗೆ ಕಾಣಿಸುವುದಿಲ್ಲ.

ನನ್ನ ಅಂತಃಕರಣವನ್ನು ಇನ್ನಷ್ಟು ಕಲಕುವುದು ರಾಮೈತಾಳರ ಕ್ರೌರ್ಯ. ತಾನು ಅನಿವಾರ್ಯವಾಗಿ, ಅದೂ ತನ್ನ ಹೆಂಡತಿ ಮತ್ತು ತಂಗಿಯ ಒತ್ತಾಯಕ್ಕೋಸ್ಕರ ಮದುವೆಯಾಗುತ್ತಿದ್ದೇನೆ ಎಂದು